**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .478/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಸುನೀಲ್ | | **ಚಾ.ಸಾ.-4** |
| **ತಂದೆ/ಗಂಡನ ಹೆಸರು** | - ಸಿದ್ಧಯ್ಯ | | **ಪ್ರಾ.ಸಾ.-7** |
| **ವಯಸ್ಸು** | - 30 ವರ್ಷ | | |
| **ಉದ್ಯೋಗ** | - ವ್ಯವಸಾಯ | | |
| **ವಾಸಸ್ಥಳ** | - ಅರುವನಹಳ್ಳಿ ಗ್ರಾಮ | | |

ದಿನಾಂಕಃ 06-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾಸಾ-1, 2 ಮತ್ತು ಅರೋಪಿತರ ಪರಿಚಯವಿರುತ್ತದೆ ನಮ್ಮ ಗ್ರಾಮಸ್ಥರು ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ, ನಾನು ಯಾವುದೇ ಗಲಾಟೆ ನೋಡಿಲ್ಲ ಬಿಡಿಸಿಲ್ಲ ಯಾರಿಗೂ ಮಾಹಿತಿ ನೀಡಿಲ್ಲ ಮತ್ತು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿಃ 20-01-2024 ರಂದು ಮಧ್ಯಾಹ್ನ 01-00 ಗಂಟೆ ಸಮಯದಲ್ಲಿ ನೀವು ನಿಮ್ಮ ಗ್ರಾಮದ ಶನೇಶ್ವರ ದೇವಾಸ್ಥಾನದ ಕಡೆಗೆ ಹೋಗುತ್ತಿದ್ದಾಗ ಆರೋಪಿ ಮತ್ತು ಚಾಸಾ-2 ರವರು ಜಮೀನಿನ ಬಳಿ ಜಗಳಮಾಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆಗ ನೀವು ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಚಾಸಾ-3 ರವರು ಸದರಿ ಜಮೀನನ್ನು ಅಳತೆ ಮಾಡಲು ಬಂದಿದ್ದು ಆ ಸಮಯದಲ್ಲಿ ಚಾಸಾ-2 ರವರಿಗೆ ನೋಟಿಸ್ ನೀಡದೇ ಅವರ ಜಮೀನಿನ ಪಕ್ಕದ ಜಮೀನನ್ನು ಅಳತೆ ಮಾಡುತ್ತಿದ್ದಾರೆಂದು ಅವರು ತಕರಾರು ತೆಗೆದು ಸರ್ವೆ ಕಾರ್ಯವನ್ನು ನಿಲ್ಲಿಸಿರುವ ವಿಚಾರ ನಿಮಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ.

ನಂತರ ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ-1 ರವರು ಚಾಸಾ-2 ರವರಿಗೆ ಕೊಲೆ ಬೆದರಿಕೆ ಹಾಕಿ ಅವರು ತೊಟ್ಟಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವರ ಗೌರವಕ್ಕೆ ಧಕ್ಕೆಯುಂಟಾಗುವಂತೆ ನಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ-2 ರವರು ಚಾಸಾ-2 ರವರ ತಲೆಯ ಮೇಲೆ ಕೈಯಿಂದ ಹಲ್ಲೆ ಮಾಡಿ ಕೆಳಕ್ಕೆ ನೂಕಿರುತ್ತಾರೆ. ಆರೋಪಿ-2 ಮತ್ತು3 ಚಾಸಾ-2 ರವರ ಕೈಕಾಲುಗಳ ಮೇಲೆ ಕಾಲಿನಿಂದ ತುಳಿದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಮತ್ತು ಇತರೇ ಸಾರ್ವಜನಿಕರು ಜಗಳ ಬಿಡಿಸಿ ಸಮಾಧಾನಪಡಿಸಿರುತ್ತೀರೀ ಎಂದರೆ ಸರಿಯಲ್ಲ. ನಂತರ ಈ ಘಟನೆ ಕುರಿತು ಚಾಸಾ-1 ರವರು ಠಾಣೆಗೆ ಹೋಗಿ ದೂರನ್ನು ನೀಡಿದ್ದು ನೀವು 24-01-2024 ರಂದು ಈ ಬಗ್ಗೆ ಪೊಲೀಸರಿಗೆ ನೀವು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಒಪ್ಪದ ಕಾರಣ, ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ನಿಪಿ-7 ರಲ್ಲಿರುವ ವಿಚಾರಗಳು ನಿಮಗೆ ಎಲ್ಲಾ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.